ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1172
ಸದಸ್ಯರ ಹೆಸರು	:	ಶ್ರೀ ಪ್ರಕಾಶ್ ಕೆ. ರಾಥೋಡ್ , (ನಾಮ ನಿರ್ದೇಶಿತ)
ಉತ್ತರಿಸಬೇಕಾದ ದಿನಾಂಕ	:	**23.12.2021**
ಉತ್ತರಿಸುವ ಸಚಿವರು	:	**ಮಾನ್ಯ ಜಲಸಂಪನ್ಮೂಲ ಸಚಿವರು**

ಕ್ರ. ಸಂ.	ಪ್ರಶ್ನೆ	ಉತ್ತರ
1	ಕರ್ನಾಟಕ ನೀರಾವರಿ ನಿಗಮದ ಅಥಣಿಯ ಹೆಚ್.ಬಿ.ಸಿ ಹಾಗೂ ಕಲಬುರಗಿಯ ಮುನಿರಾಬಾದ್ ವಲಯಗಳಲ್ಲಿ ನಕಲಿ ಬಿಲ್ ಗಳನ್ನು ಸೃಷ್ಟಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುತ್ತದೆ.
2	ಸದರಿ ನಕಲಿ ಬಿಲ್ ಸೃಷ್ಟಿಯಲ್ಲಿ ಭಾಗಿಯಾಗಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಯಾರು ಯಾರು	ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ / ನೌಕರರ ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಿದೆ.
3	ನಕಲಿ ಬಿಲ್ ಸೃಷ್ಟಿಯಿಂದ ಎಷ್ಟು ಹಣ ದುರ್ಬಳಿಕೆಯಾಗಿದೆ. ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ನಕಲಿ ಬಿಲ್ ಸೃಷ್ಟಿಯಿಂದ ರೂ.28.35 ಕೋಟಿ ಹಣ ದುರ್ಬಳಕೆಯಾಗಿರುವುದು ಪ್ರಾಥಮಿಕ ತನಿಖಾ ವರದಿಗಳಿಂದ ತಿಳಿದುಬಂದಿದ್ದು, ಪ್ರಕರಣದ ಕುರಿತು ಕೈಗೊಂಡಿರುವ ಕ್ರಮವನ್ನು **ಅನುಬಂಧ-2** ರಲ್ಲಿ ವಿವರಿಸಲಾಗಿದೆ.

ಕಡತ ಸಂಖ್ಯೆ: 403 ಎಸ್ ಎ ಎಸ್ 2021

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1172ಕ್ಕೆ ಅನುಬಂಧ-1

1. ಕಾರ್ಯಪಾಲಕ ಇಂಜಿನಿಯರ್, ಹಿಪ್ಪರಗಿ ಬ್ಯಾರೇಜ್ ನಾಲಾ (ಹೆಚ್.ಬಿ.ಸಿ.) ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಅಥಣಿ, ಇಲ್ಲಿ ನಕಲಿ ಬಿಲ್ ಸೃಷ್ಟಿಸಿ ಸರ್ಕಾರದ ಹಣ ದುರ್ಬಳಕೆ ಮಾಡಿಕೊಂಡಿರುವ ಪ್ರಕರಣದಲ್ಲಿ ಈ ಕೆಳಕಂಡ ಅಧಿಕಾರಿ / ನೌಕರರು ಭಾಗಿಯಾಗಿರುವುದು ಕಂಡುಬರುತ್ತದೆ.

ಕ್ರ. ಸಂ.	ಅಧಿಕಾರಿ / ನೌಕರರ ಹೆಸರು ಮತ್ತು ಪದನಾಮ	ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆ
1.	ಶ್ರೀ ಎಸ್.ಎನ್. ವರದರಾಜು ಮುಖ್ಯ ಲೆಕ್ಕಾಧಿಕಾರಿ	ಮುಖ್ಯ ಲೆಕ್ಕಾಧಿಕಾರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ
2.	ಶ್ರೀ ಎಂ.ಎಂ.ಮಿರ್ಜಾ ಮುಖ್ಯ ಲೆಕ್ಕಾಧಿಕಾರಿ	ಮುಖ್ಯ ಹಣಕಾಸು ಅಧಿಕಾರಿ, ಸ್ಮಾರ್ಟ್ ಸಿಟಿ, ಬೆಳಗಾವಿ
3.	ಶ್ರೀ ದೀಪಕ್ ಎ. ಮೂಡಲಗಿ ಲೆಕ್ಕ ಪರಿಶೋಧಕ	ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಕಾಡಾ), ವಿಭಾಗ ನಂ.2, ಮ & ಘ ಯೋಜನೆಗಳು, ಜಮಖಂಡಿ
4.	ಶ್ರೀಮತಿ ಶೀಲಾ ಡಿ.ಸಿ. ಲೆಕ್ಕಾಧೀಕ್ಷಕಿ	ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ
5.	ಶ್ರೀ ವಿನಾಯಕ ಅರ್ಕಸಾಲಿ ಲೆಕ್ಕಾಧೀಕ್ಷಕ	ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ
6.	ಶ್ರೀ ಅನಿಲ್ ಜಾಧವ್ ಪ್ರಥಮ ದರ್ಜೆ ಲೆಕ್ಕ ಸಹಾಯಕ	ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ
7.	ಶ್ರೀ ಶರಣಪ್ಪ ಪ್ರಥಮ ದರ್ಜೆ ಲೆಕ್ಕ ಸಹಾಯಕ	ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ

2) ಹಿಪ್ಪರಗಿ ಬ್ಯಾರೇಜ್ ಯೋಜನಾ ವಿಭಾಗ (ಹೆಚ್.ಬಿ.ಸಿ), ಅಥಣಿ, (ಬೆಳಗಾವಿ ವಲಯ), (2) ನೀರಾವರಿ ಯೋಜನಾ ವಿಭಾಗ ಸಂ.1, ಕಲಬುರಗಿ (ಕಲಬುರಗಿ ವಲಯ), (3) ತುಂಗಭದ್ರಾ ಎಡದಂಡೆ ಕಾಲುವೆ ವಿಭಾಗ ಸಂ.4 ಸಿರವಾರ (ಮುನಿರಾಬಾದ್ ವಲಯ) ವಿಭಾಗಗಳಲ್ಲಿ ನಕಲಿ ಬಿಲ್ ಸೃಷ್ಟಿಸಿ ಸರ್ಕಾರದ ಹಣ ದುರ್ಬಳಕೆ ಮಾಡಿಕೊಂಡಿರುವ ಪ್ರಕರಣದಲ್ಲಿ ಈ ಕೆಳಕಂಡ ಅಧಿಕಾರಿ / ನೌಕರರು ಭಾಗಿಯಾಗಿರುವುದು ಕಂಡುಬರುತ್ತದೆ.

ಕ್ರ. ಸಂ.	ಅಧಿಕಾರಿ / ನೌಕರರ ಹೆಸರು ಮತ್ತು ಪದನಾಮ	ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆ
1.	ಶ್ರೀ. ಅಜಿತ್ ಕುಮಾರ್ ಹೆಗಡೆ, ಮುಖ್ಯ ಲೆಕ್ಕಾಧಿಕಾರಿ,	ಪ್ರಧಾನ ಮುಖ್ಯ ಲೆಕ್ಕಾಧಿಕಾರಿ, ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ, ಅಲಮಟ್ಟಿ
2.	ಶ್ರೀ. ಶರಣಪ್ಪ, ಪ್ರಥಮ ದರ್ಜೆ ಸಹಾಯಕ	ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ
3.	ಶ್ರೀ ಕೆ.ಎಂ.ಕೋಟಿ, ಲೆಕ್ಕಾಧೀಕ್ಷಕರು	ಲೆಕ್ಕಪರಿಶೋಧನಾಧಿಕಾರಿ, ಆರ್ & ಆರ್ ವಿಭಾಗ, ಹಿಪ್ಪರಗಿ ಯೋಜನೆ, ಅಥಣಿ.
4.	ಶ್ರೀ. ಎಸ್.ಎಂ.ಕಾಜಿ, ಪ್ರಥಮ ದರ್ಜೆ ಲೆಕ್ಕ ಸಹಾಯಕರು, (ನಗದು ನಿರ್ವಾಹಕರು)	ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಧಾರವಾಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
5.	ಶ್ರೀ. ಸಂತೋಷ್ ಸದಲಗಿ, ಲೆಕ್ಕಪರಿಶೋಧನಾಧಿಕಾರಿ,	ಲೆಕ್ಕಾಧಿಕಾರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯಪುರ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
6.	ಶ್ರೀ. ಎ.ಎನ್.ರಾಮದಾಸ್ ಮುಖ್ಯ ಲೆಕ್ಕಾಧಿಕಾರಿಗಳು	ಪ್ರಸ್ತುತ ನಿವೃತ್ತ
7.	ಶ್ರೀ. ಎಸ್.ಜಿ.ಹೊಳೆಪ್ಪಗೋಳ್ ಲೆಕ್ಕಾಧಿಕಾರಿಗಳು,	ಪ್ರಸ್ತುತ ನಿವೃತ್ತ

ಕ್ರ. ಸಂ.	ಅಧಿಕಾರಿ / ನೌಕರರ ಹೆಸರು ಮತ್ತು ಪದನಾಮ	ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆ
8.	ಶ್ರೀ. ಹೆಚ್.ಎಂ.ಗಣೇಶ್ ಬಾಬು ಲೆಕ್ಕಾಧಿಕಾರಿಗಳು,	ಪ್ರಸ್ತುತ ನಿವೃತ್ತ
9.	ಶ್ರೀ. ಸಿ.ಎಫ್. ಕೂಬಿಹಾಳ್, ಲೆಕ್ಕಾಧಿಕಾರಿ, ಕನೀನಿ ಕೇಂದ್ರ ಕಛೇರಿ, ಧಾರವಾಡ	ಪ್ರಸ್ತುತ ನಿವೃತ್ತ
10.	ಶ್ರೀ. ಪ್ರಕಾಶ್ ಶೆಟ್ಟಿ, ಲೆಕ್ಕಪರಿಶೋಧನಾಧಿಕಾರಿ,	ಪ್ರಸ್ತುತ ನಿವೃತ್ತ
11.	ಶ್ರೀ. ರಘುರಾಮ್ ಲೆಕ್ಕಾಧೀಕ್ಷಕರು	ಪ್ರಸ್ತುತ ನಿವೃತ್ತ
12.	ಶ್ರೀಮತಿ ಲಕ್ಷ್ಮೀ ಬಾಯಿ ಲೆಕ್ಕಾಧೀಕ್ಷಕರು	ಪ್ರಸ್ತುತ ನಿವೃತ್ತ
13.	ಶ್ರೀ. ವಿಜಯ್ ರಾವ್ ಪ್ರಥಮ ದರ್ಜೆ ಲೆಕ್ಕ ಸಹಾಯಕರು	ಪ್ರಸ್ತುತ ನಿವೃತ್ತ
14.	ಶ್ರೀ ಮನೋಹರ್ ಕುಲಕರ್ಣಿ ಪ್ರಥಮ ದರ್ಜೆ ಲೆಕ್ಕ ಸಹಾಯಕರು	ಪ್ರಸ್ತುತ ನಿವೃತ್ತ
15.	ಶ್ರೀ. ಆರ್.ಜಿ.ರಾನಡೆ ಪ್ರಥಮ ದರ್ಜೆ ಲೆಕ್ಕ ಸಹಾಯಕರು	ಪ್ರಸ್ತುತ ನಿವೃತ್ತ
16.	ಶ್ರೀ. ಕೆ. ಪ್ರಕಾಶ್, ಲೆಕ್ಕಾಧೀಕ್ಷಕರು	ಪ್ರಸ್ತುತ ನಿಧನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1172ಕ್ಕೆ ಅನುಬಂಧ-2

1. **ಕಾರ್ಯಪಾಲಕ ಇಂಜಿನಿಯರ್, ಹಿಪ್ಪರಗಿ ಬ್ಯಾರೇಜ್ ನಾಲಾ (ಹೆಚ್.ಬಿ.ಸಿ.) ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಅಥಣಿ, ಇಲ್ಲಿ ಟೆಂಡರ್ ಕರೆಯದೆ ಹಾಗೂ ಯಾವುದೇ ಕಾಮಗಾರಿಯನ್ನು ನಿರ್ವಹಿಸದೆ ನಕಲಿ ಬಿಲ್ ಗಳನ್ನು ಸೃಷ್ಟಿಸಿ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡ ಪ್ರಕರಣದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಜಸಂಇ 65 ಸೇಇವಿ 2021, ದಿನಾಂಕ: 20.11.2021 ರಲ್ಲಿ, ಈ ಕೆಳಕಂಡಂತೆ ಕ್ರಮ ವಹಿಸಲಾಗಿದೆ:**

(ಅ) ಪ್ರಸ್ತುತ ಜಲಸಂಪನ್ಮೂಲ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಈ ಕೆಳಕಂಡ ಅಧಿಕಾರಿ / ನೌಕರರ ವಿರುದ್ಧ ಶಿಸ್ತು ಕ್ರಮ ಬಾಕಿ ಇರಿಸಿ, ಸದರಿಯವರುಗಳನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 10(1)(ಬಿ), 10(1)(ಸಿ) ಹಾಗೂ 10(1)(ಡಿ) ಗಳಡಿ ಸೇವೆಯಿಂದ ಅಮಾನತ್ತಿನಲ್ಲಿರಿಸಿ ಆದೇಶಿಸಲಾಗಿರುತ್ತದೆ:

ಕ್ರ. ಸಂ.	**ಅಧಿಕಾರಿ / ನೌಕರರ ಹೆಸರು ಮತ್ತು ಪದನಾಮ**	**ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆ**
1.	ಶ್ರೀ ಎಸ್.ಎನ್. ವರದರಾಜು ಮುಖ್ಯ ಲೆಕ್ಕಾಧಿಕಾರಿ.	ಮುಖ್ಯ ಲೆಕ್ಕಾಧಿಕಾರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ.
2.	ಶ್ರೀಮತಿ ಶೀಲಾ ಡಿ.ಸಿ. ಲೆಕ್ಕಾಧೀಕ್ಷಕಿ	ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ
3.	ಶ್ರೀ ವಿನಾಯಕ ಅರ್ಕಸಾಲಿ ಲೆಕ್ಕಾಧೀಕ್ಷಕ	ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ
4.	ಶ್ರೀ ಅನಿಲ್ ಜಾಧವ್ ಪ್ರಥಮ ದರ್ಜೆ ಲೆಕ್ಕ ಸಹಾಯಕ	ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ
5.	ಶ್ರೀ ಶರಣಪ್ಪ ಪ್ರಥಮ ದರ್ಜೆ ಲೆಕ್ಕ ಸಹಾಯಕ	ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ

ಸರ್ಕಾರದ ಮೇಲ್ಕಂಡ ಆದೇಶದನ್ವಯ ಮೇಲ್ಕಂಡ ಎಲ್ಲಾ ಆಪಾದಿತರುಗಳನ್ನು ಮುಖ್ಯ ಆಡಳಿತಾಧಿಕಾರಿಗಳು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಇವರು ತಮ್ಮ ಕಚೇರಿ ಆದೇಶ ಸಂಖ್ಯೆ: ಕನೀನಿ:ಕೇಂಕ:ಸಿ1ಇ:333ಎಎಸ್‌ಟಿ:2021-22/5029, ದಿನಾಂಕ: 23.11.2021ರನ್ವಯ ಕರ್ತವ್ಯದಿಂದ ಬಿಡುಗಡೆಗೊಳಿಸಿರುತ್ತಾರೆ.

(ಆ) ಈ ಅಕ್ರಮದಲ್ಲಿ ಭಾಗಿಯಾಗಿ ಪ್ರಸ್ತುತ ಜಲಸಂಪನ್ಮೂಲ ಇಲಾಖೆಯಿಂದ ವರ್ಗಾವಣೆಗೊಂಡು ಬೇರೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಅಧಿಕಾರಿ / ನೌಕರರ ವಿರುದ್ಧ ಶಿಸ್ತು ಕ್ರಮ ಬಾಕಿ ಇರಿಸಿ, ಸದರಿಯವರುಗಳನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 10(1)(ಬಿ), 10(1)(ಸಿ) ಹಾಗೂ 10(1)(ಡಿ) ರನ್ವಯ ಸೇವೆಯಿಂದ ಅಮಾನತ್ತಿನಲ್ಲಿರಿಸುವಂತೆ ಅವರುಗಳ ಮಾತೃ ಇಲಾಖೆಯಾದ ಆರ್ಥಿಕ ಇಲಾಖೆಗೆ ಸೂಚಿಸಲಾಗಿರುತ್ತದೆ:

ಕ್ರ. ಸಂ.	**ಅಧಿಕಾರಿ / ನೌಕರರ ಹೆಸರು ಮತ್ತು ಪದನಾಮ**	**ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆ**
1.	ಶ್ರೀ ಎಂ.ಎಂ.ಮಿರ್ಜಾ ಮುಖ್ಯ ಲೆಕ್ಕಾಧಿಕಾರಿ	ಮುಖ್ಯ ಹಣಕಾಸು ಅಧಿಕಾರಿ, ಸ್ಮಾರ್ಟ್ ಸಿಟಿ, ಬೆಳಗಾವಿ
2.	ಶ್ರೀ ದೀಪಕ್ ಎ. ಮೂಡಲಗಿ ಲೆಕ್ಕ ಪರಿಶೋಧಕ	ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಕಾಡಾ), ವಿಭಾಗ ನಂ.2, ಮ & ಘ ಯೋಜನೆಗಳು, ಜಮಖಂಡಿ

ಸರ್ಕಾರದ ಮೇಲ್ಕಂಡ ಆದೇಶದನ್ವಯ ಪ್ರಧಾನ ನಿರ್ದೇಶಕರು ಹಾಗೂ ಶಿಸ್ತು ಪ್ರಾಧಿಕಾರಿಗಳು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಇವರು ಆದೇಶ ಸಂಖ್ಯೆ: ರಾಲೆಪ 14 ಸಿನೇವಿ 2021-2022, ದಿನಾಂಕ: 20.11.2021 ರಲ್ಲಿ ಶ್ರೀ ದೀಪಕ್ ಅ ಮೂಡಲಗಿ, ಲೆಕ್ಕಾಧೀಕ್ಷಕರು ಇವರನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 10(2)(ಎ)ರನ್ವಯ ದಿನಾಂಕ: 29.10.2021 ರಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿರುತ್ತಾರೆ.

(ಇ) ಈ ಪ್ರಕರಣದಲ್ಲಿ ಭಾಗಿಯಾಗಿರುವ ಈ ಕೆಳಕಂಡ ಅಧಿಕಾರಿ / ನೌಕರರು / ಗುತಿಗೆದಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದರ ಜೊತೆಗೆ ಇವರುಗಳ ಹಾಗೂ ಇವರ ವಾರಸುದಾರರ ಸ್ಥಿರಾಸ್ತಿ ಹಾಗೂ ಚರಾಸ್ತಿಗಳನ್ನು ಪರಬಾರೆ ಮಾಡದಂತೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಹಾಗೂ ಇವರುಗಳು ಹೊಂದಿರುವ ಬ್ಯಾಂಕ್ ಖಾತೆಗಳನ್ನು ತಕ್ಷಣವೇ ಸ್ಥಗಿತಗೊಳಿಸಲು ನಿಯಮಾನುಸಾರ ಕ್ರಮ ಜರುಗಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಇವರಿಗೆ ನಿರ್ದೇಶಿಸಲಾಗಿದೆ:

ಕ್ರ. ಸಂ.	ಅಧಿಕಾರಿ / ನೌಕರರ ಹೆಸರು ಮತ್ತು ಪದನಾಮ	ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆ
1.	ಶ್ರೀ ಎಸ್.ಎನ್. ವರದರಾಜು ಮುಖ್ಯ ಲೆಕ್ಕಾಧಿಕಾರಿ	ಮುಖ್ಯ ಲೆಕ್ಕಾಧಿಕಾರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ
2.	ಶ್ರೀಮತಿ ಶೀಲಾ ಡಿ.ಸಿ. ಲೆಕ್ಕಾಧೀಕ್ಷಕಿ	ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ
3.	ಶ್ರೀ ವಿನಾಯಕ ಅರ್ಕಸಾಲಿ ಲೆಕ್ಕಾಧೀಕ್ಷಕ	ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ
4.	ಶ್ರೀ ಅನಿಲ್ ಜಾಧವ್ ಪ್ರಥಮ ದರ್ಜೆ ಲೆಕ್ಕ ಸಹಾಯಕ	ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ
5.	ಶ್ರೀ ಶರಣಪ್ಪ ಪ್ರಥಮ ದರ್ಜೆ ಲೆಕ್ಕ ಸಹಾಯಕ	ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ
6.	ಶ್ರೀ ಎಂ.ಎಂ.ಮಿರ್ಜಾ ಮುಖ್ಯ ಲೆಕ್ಕಾಧಿಕಾರಿ	ಮುಖ್ಯ ಹಣಕಾಸು ಅಧಿಕಾರಿ, ಸ್ಮಾರ್ಟ್ ಸಿಟಿ, ಬೆಳಗಾವಿ
7.	ಶ್ರೀ ದೀಪಕ್ ಎ. ಮೂಡಲಗಿ ಲೆಕ್ಕ ಪರಿಶೋಧಕ	ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಕಾಡಾ), ವಿಭಾಗ ನಂ.2, ಮ & ಘ ಯೋಜನೆಗಳು, ಜಮಖಂಡಿ
8.	ಶ್ರೀ ಎಸ್.ಆರ್. ಎಲಿಗಾರ್ ಲೆಕ್ಕಾಧಿಕಾರಿ	ಪ್ರಸ್ತುತ ನಿವೃತ್ತ
9.	ಶ್ರೀ ಎ.ವೈ.ಮುಲ್ಲಾ	ಗುತ್ತಿಗೆದಾರರು
10.	ಶ್ರೀ ಆರ್.ಬಿ.ಶೇಖ್	ಗುತ್ತಿಗೆದಾರರು

ಸರ್ಕಾರದ ಮೇಲ್ಕಂಡ ಆದೇಶದನ್ವಯ ಮುಖ್ಯ ಆಡಳಿತಾಧಿಕಾರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರು ದಿನಾಂಕ: 17.12.2021 ರ ಪತ್ರದಲ್ಲಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, **ವಿಜಯಪುರ**, ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, **ಧಾರವಾಡ**, ಕಾರ್ಯಪಾಲಕ ಇಂಜಿನಿಯರ್, ಕನೀನಿನಿ., ಪುನರ್ ವಸತಿ & ಪುನರ್ ನಿರ್ಮಾಣ ವಿಭಾಗ, **ಅಥಣಿ**, ಕಾರ್ಯಪಾಲಕ ಇಂಜಿನಿಯರ್, ಕನೀನಿನಿ., ಶಿಗ್ಗಾಂವ ಏತ ನೀರಾವರಿ ವಿಭಾಗ, **ಧಾರವಾಡ.** ಕಾರ್ಯಪಾಲಕ ಇಂಜಿನಿಯರ್, ಕನೀನಿನಿ., ಹಿಪ್ಪರಗಿ ಬ್ಯಾರೇಜ್ ಯೋಜನಾ ವಿಭಾಗ, **ಅಥಣಿ,** ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ವಿಭಾಗ, **ರಾಯಚೂರು**, ಕಾರ್ಯಪಾಲಕ ಇಂಜಿನಿಯರ್, ಕನೀನಿನಿ., ಐ.ಪಿ.ಸಿ ವಿಭಾಗ, ನಂ.1 **ಕಲಬುರಗಿ**, ಕಾರ್ಯಪಾಲಕ ಇಂಜಿನಿಯರ್, ಕನೀನಿನಿ., ತುಂಗಭದ್ರಾ ಎಡದಂಡೆ ಕಾಲುವೆ ವಿಭಾಗ, ನಂ.4 **ಸಿರವಾರ,** ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿ, **ಬೆಂಗಳೂರು,** ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ.ಟಿ.ಟಿ.ಎಂ.ಸಿ ಕಟ್ಟಡ 'ಎ' ಬ್ಲಾಕ್ 3ನೇ ಮಹಡಿ, ಬಿ.ಎಂ.ಟಿ.ಸಿ. ಶಾಂತಿನಗರ, **ಬೆಂಗಳೂರು** ಇವರುಗಳಿಗೆ ಪತ್ರ ಬರೆದು ಪ್ರಕರಣದಲ್ಲಿ ಭಾಗಿಯಾಗಿರುವ ವಾರಸುದಾರರ ಸ್ಥಿರಾಸ್ತಿ ಹಾಗೂ ಚರಾಸ್ತಿಗಳನ್ನು ಪರಬಾರೆ ಮಾಡದಂತೆ ನೊಂದಣಿ ಮತ್ತು ಮುದ್ರಾಂಕ ಇಲಾಖೆಗೆ ಮತ್ತು ಇವರುಗಳು ಹೊಂದಿರುವ ಬ್ಯಾಂಕ್ ಖಾತೆಗಳನ್ನು ತಕ್ಷಣವೇ ಸ್ಥಗಿತಗೊಳಿಸಲು ನಿಯಮಾನುಸಾರ ಕ್ರಮ ಜರುಗಿಸುವಂತೆ ಹಾಗೂ ಆಪಾದಿತರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ತಿಳಿಸಿರುತ್ತಾರೆ.

ಉಳಿದಂತೆ, ಮೇಲ್ಕಂಡ ಪಟ್ಟಿಯಲ್ಲಿರುವವರಲ್ಲಿ ಕ್ರಮ ಸಂಖ್ಯೆ (7) ರಲ್ಲಿರುವ ಶ್ರೀ ದೀಪಕ್ ಎ. ಮೂಡಲಗಿ, ಲೆಕ್ಕ ಪರಿಶೋಧಕ, ಇವರ ವಿರುದ್ಧ (1) ಉಪನಗರ ಪೊಲೀಸ್ ಠಾಣೆ, ಧಾರವಾಡ, (2) ಜಿಲ್ಲಾ ಸಿ.ಇ.ಎನ್. ಅಪರಾಧ ಪೊಲೀಸ್ ಠಾಣೆ, ಬೆಳಗಾವಿ ಹಾಗೂ (3) ಸಿ.ಇ.ಎನ್. ವಿಶೇಷ ಅಪರಾಧ ಪೊಲೀಸ್ ಠಾಣೆ, ಕಲಬುರಗಿ ಇಲ್ಲಿ ಅಪರಾಧ ಸಂಖ್ಯೆ: 0340/2021, ದಿನಾಂಕ: 22-10-2021, 0015/2021, ದಿನಾಂಕ: 26-11-2021, 0016/2021, ದಿನಾಂಕ: 26-11-2021, 0026/2021, ದಿನಾಂಕ: 09-12-2021 ಹಾಗೂ ಅಪರಾಧ ಸಂಖ್ಯೆ: 0379/2021, ದಿನಾಂಕ: 29-11-2021ನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿ (ಎಫ್.ಐ.ಆರ್.) ನ್ನು ದಾಖಲಿಸಲಾಗಿದೆ.

ಕ್ರಮ ಸಂಖ್ಯೆ (9) ಮತ್ತು (10) ರಲ್ಲಿರುವ ಗುತ್ತಿಗೆದಾರರುಗಳಾದ ಶ್ರೀ ಎ.ವೈ.ಮುಲ್ಲಾ ಮತ್ತು ಶ್ರೀ ಆರ್.ಬಿ.ಶೇಖ್, ಇವರುಗಳ ವಿರುದ್ಧ ಉಪನಗರ ಪೊಲೀಸ್ ಠಾಣೆ, ಧಾರವಾಡ, ಇಲ್ಲಿ ಅಪರಾಧ ಸಂಖ್ಯೆ: 0340/2021, ದಿನಾಂಕ: 22-10-2021 ರಂತೆ ಪ್ರಥಮ ವರ್ತಮಾನ ವರದಿ (ಎಫ್.ಐ.ಆರ್.) ದಾಖಲಿಸಲಾಗಿರುತ್ತದೆ. ಉಳಿದವರುಗಳಿಗೆ ಸಂಬಂಧಿಸಿದಂತೆ ಅಗತ್ಯ ಕ್ರಮ ಜರುಗಿಸಲಾಗುತ್ತಿದೆ.

(2) (1) ಹಿಪ್ಪರಗಿ ಬ್ಯಾರೇಜ್ ಯೋಜನಾ ವಿಭಾಗ (ಹೆಚ್.ಬಿ.ಸಿ), ಅಥಣಿ, (ಬೆಳಗಾವಿ ವಲಯ), (2) ನೀರಾವರಿ ಯೋಜನಾ ವಿಭಾಗ ಸಂ.1, ಕಲಬುರಗಿ (ಕಲಬುರಗಿ ವಲಯ), (3) ತುಂಗಭದ್ರಾ ಎಡದಂಡೆ ಕಾಲುವೆ ವಿಭಾಗ ಸಂ.4 ಸಿರವಾರ (ಮುನಿರಾಬಾದ್ ವಲಯ) ವಿಭಾಗಗಳಲ್ಲಿ ಯಾವುದೇ ಟೆಂಡರ್ ಕರೆಯದೆ ಹಾಗೂ ಯಾವುದೇ ಕಾಮಗಾರಿಯನ್ನು ನಿರ್ವಹಿಸದೆ ನಕಲಿ ಬಿಲ್‌ಗಳನ್ನು ಸೃಷ್ಟಿಸಿ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡ ಪ್ರಕರಣದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಜಸಂಇ 65 ಸೇಇವಿ 2021, ದಿನಾಂಕ: 26.11.2021 ರಲ್ಲಿ, ಈ ಕೆಳಕಂಡಂತೆ ಕ್ರಮ ವಹಿಸಲಾಗಿದೆ:

(ಅ) ಪ್ರಸ್ತುತ ಜಲಸಂಪನ್ಮೂಲ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಈ ಕೆಳಕಂಡ ಅಧಿಕಾರಿ/ ನೌಕರರ ವಿರುದ್ಧ ಶಿಸ್ತು ಕ್ರಮ ಬಾಕಿ ಇರಿಸಿ, ಸದರಿಯವರುಗಳನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 10(1)(ಬಿ), 10(1)(ಸಿ) ಹಾಗೂ 10(1)(ಡಿ) ರನ್ವಯ ಸೇವೆಯಿಂದ ಅಮಾನತ್ತಿನಲ್ಲಿರಿಸಿ ಆದೇಶಿಸಲಾಗಿರುತ್ತದೆ:

ಕ್ರ. ಸಂ.	ಅಧಿಕಾರಿ / ನೌಕರರ ಹೆಸರು ಮತ್ತು ಪದನಾಮ	ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆ
1.	ಶ್ರೀ. ಅಜಿತ್ ಕುಮಾರ್ ಹೆಗಡೆ, ಮುಖ್ಯ ಲೆಕ್ಕಾಧಿಕಾರಿ	ಪ್ರಧಾನ ಮುಖ್ಯ ಲೆಕ್ಕಾಧಿಕಾರಿ, ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ, ಅಲಮಟ್ಟಿ
2.	ಶ್ರೀ. ಶರಣಪ್ಪ, ಪ್ರಥಮ ದರ್ಜೆ ಸಹಾಯಕ	ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ
3.	ಶ್ರೀ ಕೆ.ಎಂ.ಕೋಟಿ, ಲೆಕ್ಕಾಧೀಕ್ಷಕರು	ಲೆಕ್ಕಪರಿಶೋಧನಾಧಿಕಾರಿ, ಆರ್ & ಆರ್ ವಿಭಾಗ, ಹಿಪ್ಪರಗಿ ಯೋಜನೆ, ಅಥಣಿ.

ಸರ್ಕಾರದ ಮೇಲ್ಕಂಡ ಆದೇಶದನ್ವಯ ಮೇಲ್ಕಂಡ ಆಪಾದಿತರುಗಳ ಪೈಕಿ ಶ್ರೀ ಅಜಿತ್ ಕುಮಾರ್ ಹೆಗಡೆ, ಮುಖ್ಯ ಲೆಕ್ಕಾಧಿಕಾರಿ, ಇವರನ್ನು ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಇವರ ಕಚೇರಿ ಅಧಿಕೃತ ಜ್ಞಾಪನ ಸಂಖ್ಯೆ: ಕೃಭಾಜನಿನಿ/ಪ್ರ.ವ್ಯ(ಆ)/ಸಿ-2/131/2021-22/2842, ದಿನಾಂಕ: 29-11-2021 ರನ್ವಯ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದ್ದು, ಉಳಿದ ಆಪಾದಿತರುಗಳನ್ನು ಮುಖ್ಯ ಆಡಳಿತಾಧಿಕಾರಿಗಳು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಇವರ ಪತ್ರ ಸಂಖ್ಯೆ: ಕನೀನಿ:ಕೇಂಕ:ಸಿ1ಇ:333ಎಎಸ್‌ಟಿ:2021-22/5424, ದಿನಾಂಕ: 14.12.2021ರನ್ವಯ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿರುತ್ತದೆ.

(ಆ) ಈ ಅಕ್ರಮದಲ್ಲಿ ಭಾಗಿಯಾಗಿ ಪ್ರಸ್ತುತ ಜಲಸಂಪನ್ಮೂಲ ಇಲಾಖೆಯಿಂದ ವರ್ಗಾವಣೆಗೊಂಡು ಬೇರೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಅಧಿಕಾರಿ / ನೌಕರರ ವಿರುದ್ಧ ಶಿಸ್ತು ಕ್ರಮ ಬಾಕಿ ಇರಿಸಿ, ಸದರಿಯವರುಗಳನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 10(1)(ಬಿ), 10(1)(ಸಿ) ಹಾಗೂ 10(1)(ಡಿ) ರನ್ವಯ ಸೇವೆಯಿಂದ ಅಮಾನತ್ತಿನಲ್ಲಿರಿಸುವಂತೆ ಅವರುಗಳ ಮಾತೃ ಇಲಾಖೆಯಾದ ಆರ್ಥಿಕ ಇಲಾಖೆಗೆ ಸೂಚಿಸಲಾಗಿದೆ:

ಕ್ರ. ಸಂ.	ಅಧಿಕಾರಿ / ನೌಕರರ ಹೆಸರು ಮತ್ತು ಪದನಾಮ	ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆ
1.	ಶ್ರೀ. ಎಸ್.ಎಂ.ಕಾಜಿ, ಪ್ರಥಮ ದರ್ಜೆ ಲೆಕ್ಕ ಸಹಾಯಕರು, (ನಗದು ನಿರ್ವಾಹಕರು)	ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಧಾರವಾಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
2.	ಶ್ರೀ. ಸಂತೋಷ್ ಸದಲಗಿ, ಲೆಕ್ಕಪರಿಶೋಧನಾಧಿಕಾರಿ,	ಲೆಕ್ಕಾಧಿಕಾರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯಪುರ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)

(ಇ) ಈ ಪ್ರಕರಣದಲ್ಲಿ ಭಾಗಿಯಾಗಿರುವ ಕೆಳಕಂಡ ಅಧಿಕಾರಿ / ನೌಕರರು / ಗುತ್ತಿಗೆದಾರರು ಹಾಗೂ ಅವರುಗಳ ವಾರಸುದಾರರ ಸ್ಥಿರಾಸ್ತಿ ಹಾಗೂ ಚರಾಸ್ತಿಗಳನ್ನು ಪರಭಾರೆ ಮಾಡದಂತೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಮತ್ತು ಇವರುಗಳು ಹೊಂದಿರುವ ಬ್ಯಾಂಕ್ ಖಾತೆಗಳನ್ನು ತಕ್ಷಣವೇ ಸ್ಥಗಿತಗೊಳಿಸಲು ನಿಯಮಾನುಸಾರ ಕ್ರಮ ಜರುಗಿಸುವಂತೆ ಹಾಗೂ ಈ ಕೆಳಕಂಡವರುಗಳ ಪೈಕಿ ನಿಧನ ಹೊಂದಿರುವ

ಶ್ರೀ ಕೆ.ಪ್ರಕಾಶ್, ಲೆಕ್ಕಾಧೀಕ್ಷಕರು ಇವರನ್ನು ಹೊರತುಪಡಿಸಿ ಉಳಿದ ಎಲ್ಲರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಇವರಿಗೆ ನಿರ್ದೇಶಿಸಲಾಗಿದೆ:

ಕ್ರ. ಸಂ.	ಅಧಿಕಾರಿ / ನೌಕರರ ಹೆಸರು ಮತ್ತು ಪದನಾಮ	ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆ
1.	ಶ್ರೀ. ಅಜಿತ್ ಕುಮಾರ್ ಹೆಗಡೆ, ಮುಖ್ಯ ಲೆಕ್ಕಾಧಿಕಾರಿ,	ಪ್ರಧಾನ ಮುಖ್ಯ ಲೆಕ್ಕಾಧಿಕಾರಿ, ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ, ಅಲಮಟ್ಟಿ
2.	ಶ್ರೀ. ಶರಣಪ್ಪ, ಪ್ರಥಮ ದರ್ಜೆ ಸಹಾಯಕ	ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ
3.	ಶ್ರೀ ಕೆ.ಎಂ.ಕೋಟಿ, ಲೆಕ್ಕಾಧೀಕ್ಷಕರು	ಲೆಕ್ಕಪರಿಶೋಧನಾಧಿಕಾರಿ, ಆರ್ & ಆರ್ ವಿಭಾಗ, ಹಿಪ್ಪರಗಿ ಯೋಜನೆ, ಅಥಣಿ.
4.	ಶ್ರೀ. ಎಸ್.ಎಂ.ಕಾಜಿ, ಪ್ರಥಮ ದರ್ಜೆ ಲೆಕ್ಕ ಸಹಾಯಕರು, (ನಗದು ನಿರ್ವಾಹಕರು)	ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಧಾರವಾಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
5.	ಶ್ರೀ. ಸಂತೋಷ್ ಸದಲಗಿ, ಲೆಕ್ಕಪರಿಶೋಧನಾಧಿಕಾರಿ,	ಲೆಕ್ಕಾಧಿಕಾರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯಪುರ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
6.	ಶ್ರೀ. ಎ.ಎನ್.ರಾಮದಾಸ್ ಮುಖ್ಯ ಲೆಕ್ಕಾಧಿಕಾರಿಗಳು	ಪ್ರಸ್ತುತ ನಿವೃತ್ತ
7.	ಶ್ರೀ. ಎಸ್.ಜಿ.ಹೊಳೆಪ್ಪಗೋಳ್ ಲೆಕ್ಕಾಧಿಕಾರಿಗಳು,	ಪ್ರಸ್ತುತ ನಿವೃತ್ತ
8.	ಶ್ರೀ. ಹೆಚ್.ಎಂ.ಗಣೇಶ್ ಬಾಬು ಲೆಕ್ಕಾಧಿಕಾರಿಗಳು	ಪ್ರಸ್ತುತ ನಿವೃತ್ತ
9.	ಶ್ರೀ. ಸಿ.ಎಫ್. ಕೂಬಿಹಾಳ್, ಲೆಕ್ಕಾಧಿಕಾರಿ, ಕನೀನಿ ಕೇಂದ್ರ ಕಛೇರಿ, ಧಾರವಾಡ.	ಪ್ರಸ್ತುತ ನಿವೃತ್ತ
10.	ಶ್ರೀ. ಪ್ರಕಾಶ್ ಶೆಟ್ಟಿ, ಲೆಕ್ಕಪರಿಶೋಧನಾಧಿಕಾರಿ,	ಪ್ರಸ್ತುತ ನಿವೃತ್ತ
11	ಶ್ರೀ. ರಘುರಾಮ್ ಲೆಕ್ಕಾಧೀಕ್ಷಕರು,	ಪ್ರಸ್ತುತ ನಿವೃತ್ತ
12	ಶ್ರೀಮತಿ ಲಕ್ಷ್ಮೀ ಬಾಯಿ ಲೆಕ್ಕಾಧೀಕ್ಷಕರು,	ಪ್ರಸ್ತುತ ನಿವೃತ್ತ
13	ಶ್ರೀ. ವಿಜಯ್ ರಾವ್ ಪ್ರಥಮ ದರ್ಜೆ ಲೆಕ್ಕ ಸಹಾಯಕರು	ಪ್ರಸ್ತುತ ನಿವೃತ್ತ
14	ಶ್ರೀ ಮನೋಹರ್ ಕುಲಕರ್ಣಿ ಪ್ರಥಮ ದರ್ಜೆ ಲೆಕ್ಕ ಸಹಾಯಕರು,	ಪ್ರಸ್ತುತ ನಿವೃತ್ತ
15	ಶ್ರೀ. ಆರ್.ಜಿ.ರಾನಡೆ, ಪ್ರಥಮ ದರ್ಜೆ ಲೆಕ್ಕ ಹಾಯಕರು,	ಪ್ರಸ್ತುತ ನಿವೃತ್ತ
16	ಶ್ರೀ. ಕೆ. ಪ್ರಕಾಶ್, ಲೆಕ್ಕಾಧೀಕ್ಷಕರು,	ಪ್ರಸ್ತುತ ನಿಧನ
17	ಶ್ರೀ. ಬಿ. ಜೆ. ಬುಡವಿ	ಗುತ್ತಿಗೆದಾರರು
18	ಶ್ರೀ. ಬಸವರಾಜ್ ವೈ ಪಾಟೀಲ್	ಗುತ್ತಿಗೆದಾರರು
19	ಶ್ರೀ. ಮಹೇಶ್ ಎಸ್. ದಳವಾಯಿ	ಗುತ್ತಿಗೆದಾರರು
20	ಶ್ರೀ. ಮೊಹಮ್ಮದ್ ಇಸ್ಮಾಯಿಲ್	ಗುತ್ತಿಗೆದಾರರು
21	ಶ್ರೀ. ರಾಜು ಜ್ಯೋತಿ ಬಂಡಿಗೆ	ಗುತ್ತಿಗೆದಾರರು
22	ಶ್ರೀ. ರಾಜು ಎಂ ದೊಡ್ಡಬೊಮನ್ನವರ್	ಗುತ್ತಿಗೆದಾರರು

ಮೇಲ್ಕಂಡ ಪಟ್ಟಿಯಲ್ಲಿರುವವರಲ್ಲಿ ಕ್ರಮ ಸಂಖ್ಯೆ (17) ರಲ್ಲಿರುವ ಶ್ರೀ ಬಿ.ಜಿ.ಬುಡವಿ, ಇವರ ವಿರುದ್ಧ ಸಿ.ಇ.ಎನ್. ವಿಶೇಷ ಅಪರಾಧ ಪೊಲೀಸ್ ಠಾಣೆ, ಕಲಬುರಗಿ ಇಲ್ಲಿ ಅಪರಾಧ ಸಂಖ್ಯೆ: 0026/2021, ದಿನಾಂಕ: 09-12-2021 ರಂತೆ, ಕ್ರಮ ಸಂಖ್ಯೆ (18) ರಲ್ಲಿರುವ ಶ್ರೀ ಬಸವರಾಜ್ ವೈ. ಪಾಟೀಲ್, ಇವರ ವಿರುದ್ಧ ಸಿ.ಇ.ಎನ್. ವಿಶೇಷ ಅಪರಾಧ ಪೊಲೀಸ್ ಠಾಣೆ, ಕಲಬುರಗಿ ಹಾಗೂ ಉಪನಗರ ಪೊಲೀಸ್ ಠಾಣೆ, ಧಾರವಾಡ, ಇಲ್ಲಿ ಅಪರಾಧ ಸಂಖ್ಯೆಗಳು: 0026/2021, ದಿನಾಂಕ: 09-12-2021 ಹಾಗೂ ಅಪರಾಧ ಸಂಖ್ಯೆ: 0379/2021, ದಿನಾಂಕ: 29-11-2021 ರಂತೆ, ಕ್ರಮ ಸಂಖ್ಯೆ (19) ರಲ್ಲಿರುವ ಶ್ರೀ ಮಹೇಶ್ ಎಸ್. ದಳವಾಯಿ, ಇವರ ವಿರುದ್ಧ ಸಿ.ಇ.ಎನ್. ವಿಶೇಷ ಅಪರಾಧ ಪೊಲೀಸ್ ಠಾಣೆ, ಕಲಬುರಗಿ ಇಲ್ಲಿ ಅಪರಾಧ ಸಂಖ್ಯೆ: 0026/2021, ದಿನಾಂಕ: 09-12-2021 ರಂತೆ, ಕ್ರಮ ಸಂಖ್ಯೆ (20) ರಲ್ಲಿರುವ ಶ್ರೀ ಮೊಹಮ್ಮದ್ ಇಸಾಯಿಲ್, ಇವರ ವಿರುದ್ಧ ಜಿಲ್ಲಾ ಸಿ.ಇ.ಎನ್. ಅಪರಾಧ ಪೊಲೀಸ್ ಠಾಣೆ, ಬೆಳಗಾವಿ, ಇಲ್ಲಿ ಅಪರಾಧ ಸಂಖ್ಯೆ: 0016/2021, ದಿನಾಂಕ: 26-11-2021 ರಂತೆ, ಕ್ರಮ ಸಂಖ್ಯೆ (21) ರಲ್ಲಿರುವ ಶ್ರೀ ರಾಜು ಜ್ಯೋತಿ ಬಂಡಿಗೆ, ಇವರ ವಿರುದ್ಧ ಉಪನಗರ ಪೊಲೀಸ್ ಠಾಣೆ, ಧಾರವಾಡ, ಇಲ್ಲಿ ಅಪರಾಧ ಸಂಖ್ಯೆ: 0379/2021, ದಿನಾಂಕ: 29-11-2021ರಂತೆ ಹಾಗೂ ಕ್ರಮ ಸಂಖ್ಯೆ (22) ರಲ್ಲಿರುವ ಶ್ರೀ ರಾಜು ಎಂ. ದೊಡ್ಡಬೊಮ್ಮನವರ್, ಇವರ ವಿರುದ್ಧ ಜಿಲ್ಲಾ ಸಿ.ಇ.ಎನ್. ಅಪರಾಧ ಪೊಲೀಸ್ ಠಾಣೆ, ಬೆಳಗಾವಿ, ಇಲ್ಲಿ ಅಪರಾಧ ಸಂಖ್ಯೆ: 0015/2021, ದಿನಾಂಕ: 26-11-2021 ರಂತೆ ಪ್ರಥಮ ವರ್ತಮಾನ ವರದಿ (ಎಫ್.ಐ.ಆರ್.) ಗಳನ್ನು ದಾಖಲಿಸಲಾಗಿರುತ್ತದೆ. ಉಳಿದವರುಗಳಿಗೆ ಸಂಬಂಧಿಸಿದಂತೆ ಅಗತ್ಯ ಕ್ರಮ ಜರುಗಿಸಲಾಗುತ್ತಿದೆ.

(3) ಮುಂದುವರೆದು 1) ಹಿಪ್ಪರಗಿ ಬ್ಯಾರೇಜ್ ಯೋಜನಾ ವಿಭಾಗ (ಹೆಚ್.ಬಿ.ಸಿ), ಅಥಣಿ, (ಬೆಳಗಾವಿ ವಲಯ), (2) ನೀರಾವರಿ ಯೋಜನಾ ವಿಭಾಗ ಸಂ.1, ಕಲಬುರಗಿ (ಕಲಬುರಗಿ ವಲಯ), (3) ತುಂಗಭದ್ರಾ ಎಡದಂಡೆ ಕಾಲುವೆ ವಿಭಾಗ ಸಂ.4 ಸಿರವಾರ (ಮುನಿರಾಬಾದ್ ವಲಯ) ವಿಭಾಗಗಳಲ್ಲಿ ಅಕ್ರಮ ನಡೆದಿರುವ ರೀತಿಯಲ್ಲಿಯೇ ಕರ್ನಾಟಕ ನೀರಾವರಿ ನಿಗಮ ನಿಯಮಿತದ ಇನ್ನಿತರೆ ವಿಭಾಗೀಯ ಕಛೇರಿಗಳ್ಲಿಯೂ ನಡೆದಿರಬಹುದಾದ ಸಾಧ್ಯತೆ ಇರುವುದರಿಂದ ಕರ್ನಾಟಕ ನೀರಾವರಿ ನಿಗಮ ನಿಯಮಿತ ವ್ಯಾಪ್ತಿಯಲ್ಲಿರುವ ಎಲ್ಲಾ ವಿಭಾಗ ಹಾಗೂ ಅಧೀನ ಕಛೇರಿಗಳ ವ್ಯಾಪ್ತಿಯಲ್ಲಿ ಜರುಗಿರಬಹುದಾದ ಅವ್ಯವಹಾರದ ಕುರಿತಂತೆ ಸಮಗ್ರವಾಗಿ ಪರಿಶೀಲಿಸಿ, ವಿವರವಾದ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ: ಜಸಂಇ 65 ಸೇಇವಿ 2021, ದಿನಾಂಕ: 10.12.2021 ರಲ್ಲಿ, ಪ್ರಕರಣವನ್ನು ತನಿಖೆಗಾಗಿ ಜಲಸಂಪನ್ಮೂಲ ಇಲಾಖೆಯ ವಿಚಕ್ಷಣಾ ದಳಕ್ಕೆ ವಹಿಸಲಾಗಿದೆ.